# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993 ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in


ಸಂಖ್ಯೆ: ಕುವಿ/ಪವಿ/ಪಿಸಿ/1321/2025-26 ದಿನಾಂಕ:04-06-2025

## ಪರೀಕ್ಷಾ ಪ್ರಕಟಣೆ

**ವಿಷಯ:** **ಜುಲೈ - 2025ರಲ್ಲಿ ನಡೆಯಲಿರುವ ಬಿ.ಇಡಿ, ಪ್ರಥಮ ಮತ್ತು ತೃತೀಯ ಸೆಮಿಸ್ಟರ್ (UUCMS)** ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** 1. ವಿಶ್ವವಿದ್ಯಾಲಯ ಅಧಿಸೂಚನೆ ಸಂಖ್ಯೆ: ಕುವಿ: ಎಸಿ-3: ಬಿಇಡಿ/27/4617: 2024-25. ದಿನಾಂಕ: 15-02-2025.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03-06-2025

*****

**ಜುಲೈ - 2025**ರಲ್ಲಿ ನಡೆಯಲಿರುವ **ಬಿ.ಇಡಿ,** ಪದವಿಯ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನ (Fresher's & Repeater's) ವಿದ್ಯಾರ್ಥಿಗಳ ಲಿಖಿತ ಪರೀಕ್ಷೆಗಳು **ದಿನಾಂಕ:07-07-2025** ರಿಂದ ನಡೆಯಲಿವೆ. ವೇಳಾಪಟ್ಟಿಯನ್ನು ನಂತರ ಪರಿಚಲಿಸಲಾಗುವುದು.

1. **UUCMS ತಂತ್ರಾಂಶದ ಮೂಲಕ ಪರೀಕ್ಷೆ ತೆಗೆದುಕೊಳ್ಳುವ** ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ (Freshers)ನ ಹೊಸ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು **UUCMS ತಂತ್ರಾಂಶದ ಮೂಲಕ** ಆನ್‌ಲೈನ್‌ನಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿಸಿದ ರಶೀದಿಯನ್ನು ಅರ್ಜಿಗೆ ಲಗತ್ತಿಸಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವ (ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸುವುದು, ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 89047 12601/ 70222 54993 ಸಂಪರ್ಕಿಸುವುದು. (ಕೊನೆಯ ದಿನಾಂಕದವರೆಗೆ ಅರ್ಜಿ ಸಲ್ಲಿಸಲು ಕಾಯದೇ ಮುಂಚಿತವಾಗಿಯೇ ಅನ್‌ಲೈನ್‌ನಲ್ಲಿ ಸಲ್ಲಿಸುವುದರಿಂದ ಅಂತ್ಯದಲ್ಲಿ ಉಂಟಾಗುವ ಸರ್ವರ್ ದಟ್ಟಣೆಯ ಅಡಚಣೆ ತಪ್ಪಿಸಬಹುದಾಗಿದೆ.)

| **ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು:** | | |
|---|---|---|
| 1 | **ವಿಳಂಬ ಶುಲ್ಕವಿಲ್ಲದೆ** | **09-06-2025 ರಿಂದ 16-06-2025** |
| 2 | **ವಿಳಂಬ ಶುಲ್ಕ ರೂ. 100/-ರಂತೆ (ಪ್ರತಿ ಸೆಮಿಸ್ಟರ್‌ಗೆ)** | **17-06-2025 ರಿಂದ 19-06-2025** |
| 3 | **ವಿಳಂಬ ಶುಲ್ಕ ರೂ. 500/-ರಂತೆ (ಪ್ರತಿ ಸೆಮಿಸ್ಟರ್‌ಗೆ)** | **20-06-2025** |

| **ಲಿಖಿತ / ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳ ವಿವರ.** |
|---|
| **1. ಪ್ರಾಯೋಗಿಕ ಪರೀಕ್ಷೆಗಳು-ರೆಗ್ಯುಲರ್ ವಿದ್ಯಾರ್ಥಿಗಳಿಗೆ ದಿನಾಂಕ: 04-07-2025** |
| **2. ಲಿಖಿತ ಪರೀಕ್ಷೆಗಳು ದಿನಾಂಕ:07-07-2025 ರಿಂದ ಪ್ರಾರಂಭವಾಗುತ್ತವೆ.** |
| **3. ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ದಿನಾಂಕ: 01-07-2025 ರೊಳಗೆ ಕಡ್ಡಾಯವಾಗಿ ನಮೂದಿಸಬೇಕು.** |
| **4. ವಿದ್ಯಾರ್ಥಿಗಳ ಪ್ರವೇಶ ಪತ್ರದ ಮುದ್ರಣವನ್ನು ದಿನಾಂಕ : 03-07-2025 ರಿಂದ ದಿನಾಂಕ: 05-07-2025 ರೊಳಗೆ ಮುದ್ರಿಸಿಕೊಳ್ಳಬೇಕು.** |

ಪ.ತಿ.ನೋ.



Scanned with OKEN Scanner

| ಬಿ.ಇಡಿ., ಪರೀಕ್ಷಾ ಶುಲ್ಕದ ವಿವರ | | |
|---|---|---|
| 1 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ರೂ. 1500/- |
| 2 | ಪ್ರತಿ ಪತ್ರಿಕೆಗೆ ಸೈದ್ಧಾಂತಿಕ ಪರೀಕ್ಷೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.1500/-ಕ್ಕೆ ಒಳಪಟ್ಟು) | ರೂ. 290/- |
| 3 | ಪ್ರಾಯೋಗಿಕ ಪರೀಕ್ಷೆ (ಪ್ರತಿ ಪತ್ರಿಕೆಗೆ) | ರೂ. 160/- |
| 4 | ಸೈದ್ಧಾಂತಿಕ ಪರೀಕ್ಷೆಯ ಗಣಕೀಕೃತ ಸಂರಕ್ಷಣೆ ಶುಲ್ಕ | ರೂ. 250/- |

## *ವಿದ್ಯಾರ್ಥಿಗಳಿಗೆ ಸೂಚನೆ:*

1. ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ onlineನಲ್ಲಿ ಅರ್ಜಿ ಸಲ್ಲಿಸಲು ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕ ವಿವರಗಳುಳ್ಳ ಪರೀಕ್ಷಾ ಅರ್ಜಿಯನ್ನು ಮುದ್ರಿಸಿ ನೆಟ್ ಬ್ಯಾಂಕಿಂಗ್‌ನಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ಕಾಲೇಜಿಗೆ ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card / Credit Card / Net Banking / Paytm wallet ಮೂಲಕ ನೇರವಾಗಿ ವಿದ್ಯಾರ್ಥಿಯು ತಮ್ಮ ಬ್ಯಾಂಕ್ ಖಾತೆಯಿಂದ ಶುಲ್ಕ ಪಾವತಿಸಿ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ವಿಶೇಷ ಸೂಚನೆ:** ವಿದ್ಯಾರ್ಥಿಗಳು **Internet Browsing centre**ನ ಮಾಲಿಕರ ಬ್ಯಾಂಕ್‌ಖಾತೆಯ ಮೂಲಕ ವಿಶ್ವವಿದ್ಯಾಲಯಕ್ಕೆ ಶುಲ್ಕ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು.

ಅ. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಆ. **S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸಹ ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.** ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು / ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ:23-06-2012ರಲ್ಲಿ ತಿಳಿಸಿರುತ್ತಾರೆ. ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಕಾಲೇಜಿಗೆ ಒಪ್ಪಿಸಬೇಕು.

3. **ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.**
4. **ಪರೀಕ್ಷೆಗೆ ವಿದ್ಯಾರ್ಥಿಗಳು ಪಾವತಿಸುವ ಶುಲ್ಕವನ್ನು ಯಾವುದೇ ಕಾರಣಕ್ಕಾಗಿ ಹಿಂದಿರುಗಿಸಲಾಗುವುದಿಲ್ಲ.**



Scanned with OKEN Scanner